ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ. ಕಾಶಿಇ/221/ಪಿಹೆಚ್.ಡಿ/ಮುವೇಬ/2019-20/ಸೇವಿ-1 ಕಾಲೇಜು ಶಿಕ್ಷಣ ಆಯುಕ್ತರ ಕ
ಬೆಂಗಳೂರು, ದಿನಾಂಕ: 06-10-.

ಇವರಿಗೆ:
ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು
ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ:01-01-1996 ರಿಂದ 31-12-2005ರ ಅವಧಿಯಲ್ಲಿ ಪಿ.ಹೆಚ್.ಡಿ ಪದವಿ ಪಡೆದಿರುವ ಅಧ್ಯಾಪಕರುಗಳಿಗೆ ದಿನಾಂಕ:19-09-2007 ರಿಂದ ನೀಡಿರುವ ಮುಂಗಡ ವೇತನ ಬಡ್ತಿಯನ್ನು ಕಾಲ್ಪನಿಕ ವೇತನ ನಿಗದೀಕರಣವೆಂದು ಪರಿಗಣಿಸಿರುವುದನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ:ಇಡಿ/195/ಯುಪಿಸಿ/2014, ದಿನಾಂಕ:27-06-2019.
2) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/221/ಪಿಹೆಚ್.ಡಿ/ಮುವೇಬ/2019-20/ಸೇವಿ-1, ದಿನಾಂಕ:31-10-2019
3) ಆರ್ಥಿಕ ಸೌಲಭ್ಯವನ್ನು ದಿನಾಂಕ:19-09-2007 ರಿಂದ ಪೂರ್ವಾನ್ವಯವಾಗುವಂತೆ ವಿಸ್ತರಿಸಲು ಕೋರಿ ವಿವಿಧ ದಿನಾಂಕಗಳಂದು ಸಲ್ಲಿಸಿರುವ ಅಧ್ಯಾಪಕರ ಮನವಿಗಳು.
4) ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:06-02-2020.
5) ಸರ್ಕಾರದ ಪತ್ರ ಸಂಖ್ಯೆ:ಇಡಿ/61/ಯುಪಿಸಿ 2020, ದಿನಾಂಕ:01-07-2020.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸುವಂತೆ ಸೂಚನೆ ನೀಡಲಾಗಿರುತ್ತ ಅದರಂತೆ, ಈಗಾಗಲೇ 1996ರ ಯುಜಿಸಿ ವೇತನ ಶ್ರೇಣಿಗಳಲ್ಲಿ 02 ಮುಂಗಡ ವೇತ ಬಡ್ತಿಗಳನ್ನು ಮಂಜೂರು ಮಾಡಿರುವುದನ್ನು ಉಲ್ಲೇಖ (1)ರ ಸರ್ಕಾರದ ಪತ್ರದ ನೀಡಿರುವ ಸೂಚನೆಯಂತೆ ಮೂಲ ವೇತನ + ಎ.ಜಿ.ಪಿಗೆ ಶೇಕಡ 3 ದರದಲ್ಲಿ ಮೂ ವೇತನಕ್ಕೆ ಸೇರಿಸಿ 03 ಮುಂಗಡ ವೇತನ ಬಡ್ತಿಗಳನ್ನು 2006ರ ಯುಜಿಸಿ ವೇತನ ಶ್ರೇಣಿಗಳ ದಿನಾಂಕ:19-09-2007 ರಿಂದ ಕಾಲ್ಪನಿಕವಾಗಿ ಹಾಗೂ 24-12-2009 ರಿಂದ ಆರ್ಥಿಕ ಸೌಲ ನೀಡಿ ಪರಿಷ್ಕರಿಸಿ ಉಲ್ಲೇಖ (2)ರಲ್ಲಿ ಆದೇಶಿಸಲಾಗಿರುತ್ತದೆ.

ಸದರಿ ಅಧ್ಯಾಪಕರುಗಳು ಸಹ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿರುವ ಹಿನ್ನೆಲೆಯಲ್ಲಿ ದಿನಾಂಕ:19-09-2007 ರಿಂದ ಕಾಲ್ಪನಿಕವಾಗಿ ವೇತನ ನಿಗದಿಪಡಿಸಿದ್ದು, ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಯು ಮೂಲ ವೇತನದಲ್ಲಿ ವಿಲೀನವಾಗಿರುವುದರಿಂದ ಯಾವುದೇ ಆರ್ಥಿ ಸೌಲಭ್ಯ ದೊರೆತಿಲ್ಲವೆಂದು ತಿಳಿಸುತ್ತಾ ದಿನಾಂಕ:19-09-2007 ರಿಂದ ಕಾಲ್ಪನಿಕವಾಗಿ ವೇತ ನಿಗದೀಕರಣ ಮಾಡಿರುವುದನ್ನು ಪರಿಷ್ಕರಿಸಿ, ಆ ದಿನಾಂಕದಿಂದಲೇ (ದಿನಾಂಕ:19-09-2007 ಆರ್ಥಿಕ ಸೌಲಭ್ಯವನ್ನು ವಿಸ್ತರಿಸುವಂತೆ ಕೋರಿದ್ದು, ಈ ಕುರಿತು ಸೂಕ್ತ ಆದೇಶ/ಮಾರ್ಗದರ್ಶನವನ್ನು ನೀಡುವಂತೆ ಉಲ್ಲೇಖ (4)ರ ಪತ್ರದಲ್ಲಿ ಸರ್ಕಾರವನ್ನು ಕೋರಲಾಗಿತ್ತು.

ಈ ಸಂಬಂಧದಲ್ಲಿ ಸರ್ಕಾರದಿಂದ ಸ್ವೀಕೃತವಾಗಿರುವ ಉಲ್ಲೇಖ (5)ರ ಪತ್ರದಲ್ಲಿ "ಸದ ಪ್ರಸ್ತಾವನೆಯನ್ನು ಪರಿಗಣಿಸಿದ್ದಲ್ಲಿ ಇದೇ ರೀತಿಯ ಸಮಾನಾಂತರ ಪ್ರಕರಣಗಳ ಹೆಚ್ಚಾಗಲಿದ್ದು, ಆರ್ಥಿಕ ಹೊರೆ ಉಂಟಾಗುವ ಸಂಭವವಿರುತ್ತದೆ. ಆದ್ದರಿಂದ, ಈ ರೀತಿಯ ಸಮಾನಾಂತರ ಪ್ರಕರಣಗಳು ಎಷ್ಟು ಕಂಡುಬರುತ್ತವೆ ಎಂಬ ಬಗ್ಗೆ ಅಂಕಿ-ಅಂಶಗ ವಿವರಗಳನ್ನು ಹಾಗೂ ಈ ರೀತಿಯ ಪ್ರಕರಣಗಳಿಂದ ಆಗುವ ಆರ್ಥಿಕ ಹೊರೆಗ ವಿವರಗಳನ್ನು ಒದಗಿಸುವಂತೆ" ತಿಳಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:01-01-2006ರ ಪೂರ್ವದಲ್ಲಿ ನೇಮಕಾತಿ ಹೊಂದಿದ್ದು, ದಿನಾಂಕ:01-01-1996 ರಿಂದ 31-12-2005ರ ಅವಧಿಯಲ್ಲಿ ಪಿ.ಹೆಚ್.ಡಿ ಪಡೆದಿರುವವರಿಗೆ 2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಮುಂಗಡ ವೇತನ ಬಡ್ತಿಯನ್ನು ದಿನಾಂಕ:19-09-2007 ರಿಂದ ಆರ್ಥಿಕ ಸೌಲಭ್ಯದೊಂದಿ ಮಂಜೂರುಗೊಳಿಸಬೇಕಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಆರ್ಥಿಕ ಹೊರೆಯ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದೆ

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಪ್ರತಿಯನ್ನು:

1) ಮಾಹಿತಿ ಅಧಿಕಾರಿಗಳು, ಮಾಹಿತಿ ಹಾಗೂ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಮೇಲ್ಕಂಡ ಆದೇಶವನ್ನು ಇಲಾಖಾ ವೈಬ್‌ಸೈಟ್‌ನಲ್ಲಿ ಅಳವಡಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಕಾಲೇಜಿನ ಹೆಸರು:

# ನಮೂನೆ

ನಾಂಕ:01-01-2006ಕ್ಕಿಂತ ಪೂರ್ವದಲ್ಲಿ ನೇಮಕಗೊಂಡು ದಿನಾಂಕ:01-01-1996 ರಿಂದ 31-12-2005ರೊಳಗೆ ಪಿ.ಹೆಚ್.ಡಿ ಪದವಿ ಪಡೆದು ದಿನಾಂಕ:19-09-2007 ರಿಂದ ಪದವಿಗಾಗಿ ಕಾಲ್ಪನಿಕ ವೇತನ ಬಡ್ತಿ ಪಡೆದಿರುವ/ಪಡೆಯಬೇಕಾಗಿರುವ ಅಧ್ಯಾಪಕರುಗಳ ವಿವರ

| ಹೆಸರು ಶ್ರೀ/ಶ್ರೀಮತಿ ಪದನಾಮ | ವಿಷಯ | ನೇಮಕಾತಿ ಹೊಂದಿರುವ ದಿನಾಂಕ | ನೇಮಕಾತಿಗೆ ಪರಿಗಣಿಸಿರುವ ವಿದ್ಯಾರ್ಹತೆ | ಪಿ.ಹೆಚ್.ಡಿ ಪದವಿ ಪಡೆದಿರುವ ದಿನಾಂಕ (ವಿಶ್ವವಿದ್ಯಾಲಯದ ಅಧಿಸೂಚನೆ ಹೊರಡಿಸಿರುವ ದಿನಾಂಕದಂತೆ) ಪ್ರತಿ ಲಗತ್ತಿಸುವುದು | ಹಿರಿಯ/ಆಯ್ಕೆ ವೇತನ ಶ್ರೇಣಿಗೆ ಸ್ಥಾನೀಕರಣ ಹೊಂದಿರುವ ದಿನಾಂಕ (ಆದೇಶದ ನಕಲು ಪ್ರತಿ ಲಗತ್ತಿಸುವುದು) | ಪಿ.ಹೆಚ್.ಡಿ ಪದವಿ ಪರಿಗಣಿಸಿ ಪಡೆಯಲಾಗಿರುವ ಸೌಲಭ್ಯಗಳು (ಹಿರಿಯ/ಆಯ್ಕೆ ವೇತನ ಶ್ರೇಣಿಗೆ ವಿನಾಯಿತಿ ಅಥವಾ ಮುಂಗಡ ವೇತನ ಬಡ್ತಿ ಸೌಲಭ್ಯ) | ದಿನಾಂಕ:19-09-2007 ರಿಂದ ಕಾಲ್ಪನಿಕವಾಗಿ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರಾತಿ ಪಡೆದಿರುವ ಅಧ್ಯಾಪಕರ ವೇತನ +ಎಜಿಪಿ+ಮುಂಗಡ ವೇತನ ಬಡ್ತಿ ಮತ್ತು ವೇತನ ಶ್ರೇಣಿ | ಒಂದೊಮ್ಮೆ ದಿನಾ 09-2007 ರಿಂದ ಆರ್ಥಿಕ ಸೌಲ ವಿಸ್ತರಿಸಿದಲ್ಲಿ ದಿನಾಂಕ:19-09- ರಿಂದ ದಿನಾಂಕ:2 2009ರ ಅವಧಿಯ ಹೆಚ್ಚುವರಿಯಾ ಸರ್ಕಾರಕ್ಕೆ ಉಂಟಾಗಲಿರುವ ಹೊರೆಯ ವೆಚ್ಚ( Drawn & Differ ಪಟ್ಟಿ ಲಗತ್ತಿಸುವ |
|---|---|---|---|---|---|---|---|---|
| 2 | 3 | 4 | 5 | 6 | 7 | 8 | 9 | 10 |
| | | | | | | | | |

ಒಟ್ಟು ಮೊತ್ತ

ಪ್ರಾಂಶುಪಾಲರ ಸಹಿ ಮೊಹರಿನೆ